ದಿನಾಂಕಃ06.12.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಎದುರುದಾರರ ಪರ ಶ್ರೀ ಎ.ಎಸ್.ಕೆ. ವಕೀಲರಿಂದ:**

ಮದುವೆಯಾಗಿ ಎಷ್ಟು ವರ್ಷ ಸಂಸಾರ ಚೆನ್ನಾಗಿತ್ತು ಎಂದರೆ ಸಾಕ್ಷಿಯು ಮೊದಲಿನಿಂದಲೂ ಚೆನ್ನಾಗಿ ಇರಲಿಲ್ಲ ಎಂದು ನುಡಿಯುತ್ತಾರೆ. ಮದುವೆಯಾದ 6 ವರ್ಷದ ನಂತರ ನಾನು ಮುಂಡಾಜೆಯಲ್ಲಿ ಟೈಲರಿಂಗ್ ಶಾಪ್ ಪ್ರಾರಂಭಿಸಿದೆ. ಆ ಅಂಗಡಿಯನ್ನು ಸುಮಾರು 4-5 ವರ್ಷ ನಡೆಸಿದ್ದೆ. ಲಾಸ್ ಆದ ಕಾರಣ ಆ ಅಂಗಡಿಯನ್ನು ಮುಚ್ಚಿದ್ದೇನೆ. ಸಾಕ್ಷಿಯು ಸ್ವತಃ ಬಾಡಿಗೆ ಕಟ್ಟಲು ಸಹಾ ಕಷ್ಟವಾಗುತ್ತಿತ್ತು ಎಂದು ನುಡಿಯುತ್ತಾರೆ. ಆ ಅಂಗಡಿಯಿಂದ ಒಟ್ಟು 5-6 ಸಾವಿರ ನಷ್ಟವಾಗಿದೆ. ನನ್ನ ಅಂಗಡಿಯಲ್ಲಿ 9 ಟೈಲರಿಂಗ್ ಮಷಿನ್ ಇತ್ತು. ಸಾಕ್ಷಿಯು ಸ್ವತಃ ಆ ಮಷಿನ್ ಗಳ ಪೈಕಿ ಮನೆಯಲ್ಲಿ ಇದ್ದ 4 ಮಷಿನ್ ಗಳನ್ನು ನಾನು ಹೊರಗೆ ಬಂದ ಮೇಲೆ ಎದುರುದಾರರೇ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಉಳಿದ ಮಷಿನ್ ಗಳನ್ನು ತರಬೇತಿಗೆ ಬರುವವರಿಗೆ ನಾನೇ ಮಾರಾಟ ಮಾಡಿದ್ದೇನೆ. ಆ ಎಲ್ಲಾ ಮಷಿನ್ ಗಳನ್ನು ರೂ.12,000/- ಕ್ಕೆ ಖರೀದಿಸಿದ್ದೆ.

ನಾನು ಟೈಲರಿಂಗ್ ಶಾಪ್ ಮಾಡುವ ಕಾಲಕ್ಕೆ ಒಂದು ಹೊಸ ಟೈಲರಿಂಗ್ ಮಷಿನ್ ಗೆ ಎಷ್ಟು ಬೆಲೆ ಇತ್ತು ಎಂದರೆ ಸಾಕ್ಷಿಯು ಸುಮಾರು 3½ ಇದ್ದಿರಬಹುದು ಎಂದು ನುಡಿಯುತ್ತಾರೆ. ಮದುವೆಯಾದ ದಿನದಿಂದ ಟೈಲರಿಂಗ್ ಶಾಪ್ ತೆರೆಯುವ ಮೊದಲು ನಾನು ಯಾವುದೇ ಕೆಲಸಕ್ಕೆ ಹೋಗುತ್ತಿರಲಿಲ್ಲ. ಆ ಸಂದರ್ಭದಲ್ಲಿ ನನಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿ. ಈಗಾಗಿ ಟೈಲರಿಂಗ್ ಮಷಿನ್ ಗಳನ್ನು ಎದುರುದಾರರೇ ಖರೀದಿಸಿದ್ದಾರೆ ಎಂದರೆ ಸಾಕ್ಷಿಯು ತನ್ನ ಮನೆಯವರು ಸ್ವಲ್ಪ ದುಡ್ಡು ಕೊಟ್ಟಿದ್ದು ತಾನು ಸಹಾ ಸಂಘದಿಂದ ಸಾಲ ಪಡೆದು ಖರೀದಿಸಿರುವುದಾಗಿ ನುಡಿಯುತ್ತಾರೆ. ನಿಮ್ಮ ಸಂಘದ ಸಾಲವನ್ನು ಎದುರುದಾರರೇ ತೀರಿಸುತ್ತಿದ್ದರು ಎಂದರೆ ಸಾಕ್ಷಿಯು ಟೈಲರಿಂಗ್ ಮಷಿನ್ ಗೆ ಪಡೆದ ಸಾಲವನ್ನು ನಾನೇ ತೀರಿಸುತ್ತಿದ್ದೆ ಹಾಗೂ ಎದುರುದಾರರು ನನ್ನ ಸಂಘದಿಂದ ತನ್ನ ವೈಯಕ್ತಿಕಕ್ಕೆ ಸಾಲ ಪಡೆದಿದ್ದನ್ನು ಅವರು ತೀರಿಸಿದ್ದಾರೆ ಎಂದು ನುಡಿಯುತ್ತಾರೆ. ಸ್ವ ಸಹಾಯ ಸಂಘದಿಂದ ಅದರ ಸದಸ್ಯರಿಗೆ ಮಾತ್ರ ಸಾಲ ಕೊಡುತ್ತಾರೆ ಎಂದರೆ ಸರಿ. ಎದುರುದಾರರು ಸ್ವ ಸಹಾಯ ಸಂಘದ ಸದಸ್ಯರಾಗಿರಲಿಲ್ಲ ಎಂದರೆ ಸರಿ. ನಾನು ಹೇಳಿದಂತೆ ಎದುರುದಾರರು ನನ್ನ ಸಂಘದಿಂದ ಸಾಲ ಪಡೆದಿಲ್ಲ ಹಾಗೂ

ನಾನೇ ನನ್ನ ದುಬಾರಿ ಖರ್ಚಿಗಾಗಿ ಪಡೆದ ಸಾಲವನ್ನು ಎದುರುದಾರರು ತೀರಿಸಿದ್ದಾರೆ ಎಂದರೆ ಸರಿಯಲ್ಲ.

ಮದುವೆಯಾದ ದಿನದಿಂದ ಎದುರುದಾರರನ್ನು ಬಿಡುವ ದಿನದ ವರೆಗೂ ಅವರು ನನಗೆ ಎಷ್ಟು ಹಣ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಅಂಗಡಿ ತೆರೆಯುವಾಗ ಸಂಘದ ಸದಸ್ಯತ್ವ ಪಡೆದಿದ್ದು ನಂತರ ಎದುರುದಾರರು ಸಾಲ ತೆಗೆಸುತ್ತಿದ್ದರು ಆದರೆ ಇಸವಿ ನನಗೆ ಗೊತ್ತಿಲ್ಲ. ಇಂತದ್ದೇ ಉದ್ದೇಶಕ್ಕೆಂದು ನಾನು ಸಾಲ ಪಡೆದುಕೊಳ್ಳುತ್ತಿರಲಿಲ್ಲ. ಸಾಲದ ಉದ್ದೇಶವನ್ನು ಸ್ಪಷ್ಟವಾಗಿ ನಮೂದಿಸಿಯೇ ಸಂಘದಿಂದ ಸಾಲ ಪಡೆಯಬೇಕು ಎಂದರೆ ಸಾಕ್ಷಿಯು ನಮ್ಮ ಸಂಘದಲ್ಲಿ ಹಾಗೇ ಇರಲಿಲ್ಲ ಎಂದು ನುಡಿಯುತ್ತಾರೆ. ಸಂಘದಿಂದ ಪಡೆದ ಸಾಲಗಳನ್ನೆಲ್ಲಾ ನಾನೇ ಪಡೆದುಕೊಂಡಿದ್ದು ಎದುರುದಾರರು ಸಾಲ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಸಂಘದ ಸದಸ್ಯಳಾದ ನಂತರ ಎದುರುದಾರರು ರೂ.1,00,000/- ಲಕ್ಷದಷ್ಟು ಸಾಲ ಪಡೆದಿದ್ದಾರೆ. ರೂ.2,500-3,000/- ರಂತೆ ಪ್ರತೀ 15 ದಿನಕ್ಕೊಮ್ಮೆ ಸಾಲದ ಕಂತು ಕಟ್ಟುತ್ತಿದ್ದೆವು. ಯಾವ ಇಸವಿಯಂದು ಸಾಲ ಮರುಪಾವತಿಯಾಗಿದೆ ಎಂದರೆ ಸಾಕ್ಷಿಯು ಇಸವಿ ಗೊತ್ತಿಲ್ಲ ಆದರೆ 4-5 ವರ್ಷಗಳ ಹಿಂದೆ ಮರುಪಾವತಿ ಮಾಡಿರಬಹುದು ಎಂದು ನುಡಿಯುತ್ತಾರೆ.

ನನ್ನ ತಮ್ಮನ ಮದುವೆ 2021 ನೇ ಇಸವಿಯಲ್ಲಿ ಆಗಿದೆ. ಆ ಮದುವೆ ಸಮಯಕ್ಕೆ ರೂ.35,000/- ಗಳನ್ನು ಎದುರುದಾರರಿಂದ ನನ್ನ ತಮ್ಮನಿಗೆ ಕೊಡಿಸಿದ್ದೆ. ಯಾವ ಇಸವಿಯಿಂದ ಎದುರುದಾರರು ನನ್ನ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಆ ರೀತಿ ನನ್ನ ಬ್ಯಾಂಕಿಗೆ ಹಣ ಹಾಕುವ ಮೊದಲು 2-3 ವರ್ಷ ಎದುರುದಾರರು ನಗದಾಗಿ ನನಗೆ ಹಣ ಕೊಟ್ಟಿದ್ದಾರೆ. ನನ್ನ ತಾಯಿಗೆ ಆರೋಗ್ಯ ಸರಿಯಿಲ್ಲದೇ ಇರುವಾಗ ಎದುರುದಾರರು ಹಣ ಕೊಟ್ಟಿಲ್ಲ. ನನ್ನ ತಮ್ಮನ ಮದುವೆ ಕಾಲಕ್ಕೆ ಎದುರುದಾರರು ರೂ.16,000/- ಬೆಲೆ ಬಾಳುವ ಚಿನ್ನದ ರಿಂಗ್ ನ್ನು ಉಡುಗೊರೆಯಾಗಿ ಕೊಟ್ಟಿದ್ದಾರೆ. ಟೈಲರಿಂಗ್ ಶಾಪ್ ಮುಚ್ಚಿದ ನಂತರ ನಿಮಗೆ ಆದಾಯ ಇರಲಿಲ್ಲ ಎಂದರೆ ಸಾಕ್ಷಿಯು ಮನೆಯಲ್ಲೇ ಟೈಲರಿಂಗ್ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ಆಗ ತಿಂಗಳಿಗೆ ರೂ.1,500/- ಆದಾಯ ಇತ್ತು. ನನಗೆ ಅಂದಿನ ವಿಜಯ ಬ್ಯಾಂಕ್/ಬ್ಯಾಂಕ್ ಆಫ್ ಬರೋಡಾ, ಮುಂಡಾಜೆ ಶಾಖೆಯಲ್ಲಿ ಖಾತೆ ಇತ್ತು. ಟೈಲರಿಂಗ್ ಕೆಲಸದಿಂದ ನನಗೆ ನಗದು ಹಣ ಬರುತ್ತಿತ್ತು. ನಿಮ್ಮ ಬ್ಯಾಂಕ್ ಖಾತೆಯಲ್ಲಿ ವಾರ್ಷಿಕವಾಗಿ ಎಷ್ಟು ಮೊತ್ತದ ವಹಿವಾಟು ಆಗುತ್ತಿತ್ತು

ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎದುರುದಾರರೇ ಹಣ ಹಾಕಿ ತೆಗೆಯುತ್ತಿದ್ದರು ಎಂದು ನುಡಿಯುತ್ತಾರೆ. ಆ ಖಾತೆಯ ಸಂಬಂಧ ಎಟಿಎಂ ಕಾರ್ಡ್ ಇದ್ದು ಅದು ಇಂದಿಗೂ ಎದುರುದಾರರ ಬಳಿಯೇ ಇದೆ.

ನಾನು ಹೇಳಿದಂತೆ ನನ್ನ ಎಟಿಎಂ ಕಾರ್ಡ್ ಎದುರುದಾರರ ಬಳಿ ಇಲ್ಲ ಹಾಗೂ ನನ್ನ ಬ್ಯಾಂಕ್ ಖಾತೆಯ ಎಲ್ಲಾ ವ್ಯವಹಾರಗಳನ್ನು ಎಟಿಎಂ ಕಾರ್ಡ್ ಮತ್ತು ಚೆಕ್ ನ ಮೂಲಕ ನಾನೇ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಬಿ.ಎ., ಪಧವೀದರೆ. ನನ್ನ ಬ್ಯಾಂಕ್ ಖಾತೆಗೆ ಚಿಕ್ಕಮಗಳೂರು ಜಿಲ್ಲೆಯಿಂದ ಹಣ ಜಮೆಯಾಗಿದೆ ಸಾಕ್ಷಿಯು ಸ್ವತಃ ನನ್ನ ಚಿಕ್ಕಪ್ಪ ಅವರ ಮಕ್ಕಳ ಫೀಜ್ ಗಾಗಿ ರೂ.10,000/- ಮಾತ್ರ ಕಳುಹಿಸಿದ್ದರು ಎಂದು ನುಡಿಯುತ್ತಾರೆ. ಇದನ್ನು ಹೊರತುಪಡಿಸಿ ಬೇರೆ ಯಾವುದೇ ಹಣವೂ ಸಹಾ ಚಿಕ್ಕಮಗಳೂರು ಜಿಲ್ಲೆಯಿಂದ ನನ್ನ ಖಾತೆಗೆ ಬಂದಿಲ್ಲ. ನನ್ನ ಖಾತೆಗೆ ಆಗಾಗ ದೊಡ್ಡ ಮೊತ್ತಗಳು ಬರುತ್ತಿದ್ದು ಆ ಬಗ್ಗೆ ಎದುರುದಾರರು ಕೇಳಿದ್ದಕ್ಕೆ ಸಂಬಂಧಿಕರು ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಬ್ಯಾಂಕ್ ಖಾತೆ ಸಂಖ್ಯೆ ನನಗೆ ಗೊತ್ತಿಲ್ಲ. ಆ ಬ್ಯಾಂಕ್ ಖಾತೆಯನ್ನು ಬಳಸದೇ ಈಗ ಮೂರು ವರ್ಷವಾಗಿದೆ. ಬ್ಯಾಂಕ್ ಖಾತೆ ಸಂ.70880100009616 ನನಗೆ ಸೇರಿದ್ದು ಎಂದರೆ ಸರಿ. ಈಗ ನೋಡುತ್ತಿರುವ ದಾಖಲೆ ಸದರಿ ಖಾತೆಯ ಪಾಸ್ ಬುಕ್ ನ ಮೊದಲನೆ ಪುಟದ ಪ್ರತಿ ಎಂದರೆ ಸರಿ. ಸಾಕ್ಷಿಯು ಒಪ್ಪಿದ ದಾಖಲೆಯನ್ನು ನಿಆರ್-1 ಎಂದು ಗುರುತಿಸಲಾಯಿತು.

ಎದುರುದಾರರನ್ನು ಬಿಟ್ಟು ಬರುವಾಗ ನನ್ನ ಸ್ವ ಸಹಾಯ ಸಂಘದ ಖಾತೆಯಲ್ಲಿ ರೂ.20,000/- ಹಣ ಇತ್ತು. ನಾನು ಬರುವಾಗ ಆ ಖಾತೆಯನ್ನು ಕ್ಲೋಜ್ ಮಾಡಿಸಿ ಅದರಲ್ಲಿ ಇದ್ದ ಹಣ ತೆಗೆದುಕೊಂಡು ಬಂದಿದ್ದೇನೆ. ನಾನು ಮನೆ ಬಿಟ್ಟು ಬರುವಾಗ ಎದುರುದಾರರು ಬೆಂಗಳೂರಿನಲ್ಲಿ ಇದ್ದರು ಎಂದರೆ ಸರಿಯಲ್ಲ. ಆ ರೀತಿ ಮನೆ ಬಿಟ್ಟು ಬರುವ 4 ದಿನದ ಮುಂಚೆ ಕಕ್ಕಂಜೆಯ ಕೃಷ್ಣ ಆಸ್ಪತ್ರೆಗೆ ನನ್ನ ತಾಯಿಯನ್ನು ದಾಖಲಿಸಿದ್ದೆವು. ಆಸ್ಪತ್ರೆಯಲ್ಲಿ ನನ್ನ ತಾಯಿಯೊಂದಿಗೆ ನಾನು ಇದ್ದೆ ಹಾಗೂ ಮನೆಗೆ ಬರುತ್ತಾ ಹೋಗುತ್ತಿದ್ದೆ. ಎದುರುದಾರರನ್ನು ಬಿಟ್ಟು ಹೋಗಲೆಂದೇ ನನ್ನ ತಾಯಿಯನ್ನು ಕಕ್ಕಂಜೆಗೆ ಕರೆಸಿ ಸುಳ್ಳು ಕಾರಣದಿಂದ ಆಸ್ಪತ್ರೆಗೆ ದಾಖಲಿಸಿದ್ದೆ ಎಂದರೆ ಸರಿಯಲ್ಲ. ಎದುರುದಾರರು ಉದ್ಯೋಗದ ನಿಮಿತ್ತ ಬೆಂಗಳೂರಿಗೆ ಹೋಗಿದ್ದಾಗ ನನ್ನ ಎಲ್ಲಾ ವಸ್ತುಗಳನ್ನು ತೆಗೆದುಕೊಂಡು ಮನೆಯಿಂದ ಬಂದಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ

ಬಿಟ್ಟು ಹೋದ ನಂತರ ಧರ್ಮಸ್ಥಳ ಪೋಲಿಸ್ ಠಾಣೆಗೆ ದೂರು ಕೊಟ್ಟಿದ್ದು ಆಗ ಅವರನ್ನು ಪೋಲಿಸರು ಕರೆಸಿದ್ದರು ಎಂದರೆ ಸರಿಯಲ್ಲ.

ನಾನು ನ್ಯಾಯಾಲಯಕ್ಕೆ ಪ್ರಕರಣ ದಾಖಲಿಸಿ ವಾಪಸ್ಸು ತೆಗೆದುಕೊಂಡು ಎದುರುದಾರರೊಂದಿಗೆ ಹೋಗಿದ್ದಾಗ ಅವರು ನನ್ನ ಕುರಿತು ಧರ್ಮಸ್ಥಳ ಪೋಲಿಸ್ ಠಾಣೆಯಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಆ ರೀತಿ 2021 ನೇ ಇಸವಿಯಲ್ಲಿ ನಾನು ಪ್ರಥಮವಾಗಿ ಪ್ರಕರಣ ದಾಖಲಿಸಿದ್ದೆ. ನಾನು ಯಾವುದೇ ಪ್ರಕರಣ ದಾಖಲಿಸುವ ಮೊದಲೇ ದಿ.08.07.2021 ರಂದು ಎದುರುದಾರರೊಂದಿಗೆ ಜಗಳ ಮಾಡಿ ಮನೆ ಬಿಟ್ಟು ಹೋಗಿದ್ದು ಅವರು ದಿ.09.07.2021 ರಂದು ಧರ್ಮಸ್ಥಳ ಪೋಲಿಸ್ ಠಾಣೆಗೆ ಅರ್ಜಿ ಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿಯು ಸ್ವತಃ ವಾಪಸ್ಸು ಹೋದ ನಂತರ ಅರ್ಜಿ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಆ ಅರ್ಜಿಯ ಅನ್ವಯ ನನ್ನನ್ನು ಪೋಲಿಸರು ಠಾಣೆಗೆ ಕರೆಸಿದ್ದರು ಎಂದರೆ ಸರಿ. ನಾನು ಎದುರುದಾರರೊಂದಿಗೆ ಮನೆಗೆ ಹೋಗುವುದು ಎಂದು ಠಾಣೆಯಲ್ಲಿ ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ. ಆಗ ಎದುರುದಾರರ ಮನೆಗೆ ಹೋಗದೇ ದಿ.12.07.2021 ರಂದು ಬೆಳ್ತಂಗಡಿ CDPO ಕಚೇರಿಗೆ ದೂರು ದಾಖಲಿಸಿದ್ದೇನೆ ಎಂದರೆ ಸಾಕ್ಷಿಯು ನಾನು ದೂರು ದಾಖಲಿಸಿಲ್ಲ ಪೋಲಿಸರೇ ನಮ್ಮನ್ನು ಕಳುಹಿಸಿದ್ದರು ಎಂದು ನುಡಿಯುತ್ತಾರೆ. CDPO ಕಚೇರಿಯಲ್ಲಿ ದಿ.19.07.2021 ರಂದು ಮಾತುಕತೆಯಾಯಿತು ಎಂದರೆ ಸರಿ. ಅಲ್ಲಿಯೂ ಸಹಾ ನಾನು ಎದುರುದಾರರ ಮನೆಗೆ ಹೋಗುತ್ತೇನೆ ಎಂದು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ.

ಮಾತುಕತೆಯಾದ ನಂತರವೂ ಸಹಾ ನಾನು ಎದುರುದಾರರ ಮನೆಗೆ ಹೋಗದ ಕಾರಣ ಅವರು ಧರ್ಮಸ್ಥಳ ಪೋಲಿಸ್ ಠಾಣೆ ಮತ್ತು ವೃತ್ತ ನಿರೀಕ್ಷಕರಿಗೆ ಅರ್ಜಿ ಸಲ್ಲಿಸಿಕೊಂಡಿದ್ದರು ಎಂದರೆ ಸರಿ. ಆ ಸಂಬಂಧ ನ್ಯಾಯಾಲಯಕ್ಕೆ ಹೋಗುವಂತೆ ವೃತ್ತ ನಿರೀಕ್ಷಕರು ನನಗೆ ಹೇಳಿದ್ದರು. ಅದಾದ ನಂತರ ನಾನು ಎದುರುದಾರರೊಂದಿಗೆ ಹೋಗದೇ ಮೂಡಿಗೆರೆ ನ್ಯಾಯಾಲಯದಲ್ಲಿ MC.30/2021 ಮತ್ತು Crl.M.152/2021 ರಂತೆ ಅರ್ಜಿಗಳನ್ನು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಪ್ರಕರಣಗಳು ಹಾಗೂ ದೂರಗಳನ್ನು ದಾಖಲು ಮಾಡುವ ಮುನ್ನ ದಿ.08.04.2021 ರಂದು ನನ್ನ ಸೂಚನೆಯಂತೆ ನನ್ನ ತಂದೆ ಮತ್ತು ಸಹೋದರರು ಎದುರುದಾರರು ಮನೆಯಲ್ಲಿ ಇಲ್ಲದ ವೇಳೆ ನನ್ನನ್ನು ಹಾಗೂ ಮಕ್ಕಳನ್ನು ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ಆ ಸಮಯಕ್ಕೆ ನನ್ನ

ವಸ್ತುಗಳನ್ನೆಲ್ಲಾ ನಾನು ತೆಗೆದುಕೊಂಡು ಹೋಗಿದ್ದೆ. ನನ್ನದು ಎಂದು ಒಂದು ಚಿನ್ನದ ಸರ ಮಾತ್ರ ಇತ್ತು. ಎದುರುದಾರರು ನನಗಾಗಲೀ ಮಕ್ಕಳಿಗಾಗಲೀ ಒಡವೆಗಳನ್ನು ಕೊಡಿಸಿಲ್ಲ ಆದರೆ ತಾಳೀ ಸರ ಮಾತ್ರ ಮದುವೆ ಸಮಯಕ್ಕೆ ನಮ್ಮ ಬಳಿಯೇ ಹಣ ತೆಗೆದುಕೊಂಡು ಮಾಡಿಸಿ ಕೊಟ್ಟಿದ್ದಾರೆ. ನನಗೂ ಹಾಗೂ ಮಕ್ಕಳಿಗೆ ಲಕ್ಷಾಂತರ ಬೆಲೆ ಬಾಳುವಷ್ಟು ಒಡವೆಗಳನ್ನು ಎದುರುದಾರರು ತೆಗೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ಎಲ್ಲಾ ಒಡವೆಗಳನ್ನು ದಿ.08.04.2021 ರಂದು ನನ್ನೊಂದಿಗೆ ತೆಗೆದುಕೊಂಡು ಹೋಗಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ. ಹೇ. ಕೇ. ಸ. ಇ. ಎ. ಒ.,

ಸಾಕ್ಷಿ ಸಹಿಃ

ಸಹಿ/-

C/c ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.,
ಮೂಡಿಗೆರೆ.